# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 110/2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಕಿರಣ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಗೋವಿಂದರಾಜು | | 11.09.2024 |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ರಿಯಲ್ ಎಸ್ಟೇಟ್ | ಪ್ರಾ.ಸಾ. | ಃ 32 |
| ವಾಸಸ್ಥಳ | ಃ ಅಗ್ರಹಾರ | ಚಾ.ಸಾ. | ಃ 50 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಕೋರ್ಟ್ ಮುಂದೆ ಇರುವ 5ನೇ ಆರೋಪಿತರಿಗೆ ನಾನು ಬಾಡಿಗೆ ಮನೆ ಕೊಡಿಸಿದ್ದ ಬಗ್ಗೆ ಈಗ ನೆನಪಿಲ್ಲ. ನನ್ನ ಪರಿಚಯದ ರವಿ ಎನ್ನುವವರು ಹೇಳಿದ್ದರಿಂದ 2015 ರಲ್ಲಿ ಆ ರವಿ ಇವರ ಸ್ನೇಹಿತರಿಗೆ ದಟ್ಟಗಳ್ಳಿಯಿಂದ ಸ್ವಲ್ಪ ಮುಂದೆ ಒಂದು ಬಾಡಿಗೆ ಮನೆಯನ್ನು ಕೊಡಿಸಿದ್ದೆ. ಆ ಮನೆಯ ಮಾಲೀಕರ ಹೆಸರು ಅರಸು ಇರುತ್ತದೆ. ಆದರೆ ಆ ಕಾಲಕ್ಕೆ ಅವರು ಬಾಡಿಗೆ ಕುರಿತು ದಾಖಲೆ ಮಾಡಿಕೊಂಡಿದ್ದರೋ ಇಲ್ಲವೊ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ-97 ದಾಖಲೆಯಲ್ಲಿನ ಸಹಿ ನನ್ನದೇ ಇದ್ದು ಆ ದಾಖಲೆಯನ್ನು ಆ ಅರಸು ಇವರ ಮನೆಯನ್ನು ಬಾಡಿಗೆಗೆ ಕೊಟ್ಟ ಸ್ವಲ್ಪ ದಿನಗಳ ನಂತರ ಗಲಾಟೆಯಾಗಿದೆ ಎಂದು ಪೋಲೀಸ್ ಠಾಣೆಯಲ್ಲಿ ಆ ದಾಖಲೆಯನ್ನು ಮಾಡಿಸಿದ್ದರು. ಸದರಿ ಸಹಿಯನ್ನು ನಿ.ಪಿ-97(ಡಿ) ಎಂದು ಗುರುತಿಸಿದೆ. ಆ ಅರಸು ಇವರ ಮನೆಗೆ ಅಡ್ವಾನ್ಸ್ ಹಣ ಎಂದು 50 ಸಾವಿರ ರೂಪಾಯಿ ಪಡೆದಿದ್ದರು ಬಾಡಿಗೆ

ಎಷ್ಟೆಂದು ನೆನಪಿಲ್ಲ. ಪೋಲೀಸರ ಮುಂದೆ ನಾನೇ ಬಾಡಿಗೆ ಬಗ್ಗೆ ಮಾತನಾಡಿ ಬಾಡಿಗೆ ಪತ್ರ ಮಾಡಿಸಿಕೊಟ್ಟಿದ್ದೆ ಎಂದು ಹೇಳಿಕೆ ಕೊಟ್ಟಿಲ್ಲ. ಪೋಲೀಸ್ ಠಾಣೆಯಲ್ಲಿ ಬಾಡಿಗೆ ಪತ್ರವನ್ನು ಮಾಡಿಸಿಕೊಂಡ ಬಗ್ಗೆ ನನ್ನನ್ನು ವಿಚಾರಿಸಿದ್ದರು.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* *2016* ಜನವರಿಯಲ್ಲಿ ಕೋರ್ಟ್ ಮುಂದೆ ಇರುವ *5* ನೇ ಆರೋಪಿತನು ನನಗೆ ವಿನಾಯಕನಗರದ ರವಿ ಎನ್ನುವವರು ಮೂಲಕ ಪರಿಚಯವಾಗಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ 5 ನೇ ಆರೋಪಿತ ತಾನು ಅಮೆಜಾನ್, ಫ್ಲಿಪ್ ಕಾರ್ಟ್ ನಲ್ಲಿ ಕೆಲಸ ಮಾಡಿಕೊಂಡಿದ್ದು ತನಗೆ ಮತ್ತು ತನ್ನ ಸ್ನೇಹಿತರಿಗೆ ದಟ್ಟಗಳ್ಳಿ, ಶ್ರೀರಾಂಪುರದಲ್ಲಿ ಮನೆ ಬಾಡಿಗೆಗೆ ಬೇಕು ಎಂದು ಕೇಳಿದಾಗ ನಾನು ಅಲ್ಲಿ ಅವಿವಾಹಿತರಿಗೆ ಮನೆ ಬಾಡಿಗೆ ಕೊಡುವುದಿಲ್ಲ ಎಂದು ಕೇರ್ಗಳ್ಳಿಯ ಮನೆಯನ್ನು ಬಾಡಿಗೆಗೆ ತೋರಿಸಿ ಅವರು ಒಪ್ಪಿದ ಬಳಿಕ ಜನವರಿ ತಿಂಗಳ ಕೊನೆ ವಾರದಲ್ಲಿ ಮನೆ ಮಾಲೀಕರಾದ ಚಂದ್ರರಾಜೇ ಅರಸ್ ಮತ್ತು 5 ನೇ ಆರೋಪಿತ ಧರ್ಮೇಂದ್ರ ಇವರನ್ನು ಕರೆದುಕೊಂಡು ಹೋಗಿ ಬಾಡಿಗೆ ಕರಾರು ಪತ್ರ ಮಾಡಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿ.ಪಿ-97 ಆ ಕಾಲಕ್ಕೆ ಮಾಡಿದ್ದ ಬಾಡಿಗೆ ಕರಾರು ಪತ್ರ ಮತ್ತು ಅದಕ್ಕೆ ನಾನು ಸಾಕ್ಷಿದಾರನಾಗಿ ಸಹ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ 2016 ನೇ ಸಾಲಿನ --------- ವಿನಂತಿಸಿಕೊಂಡಿರುತ್ತೇನೆ ಎಂದು ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-118 ಎಂದು

ಗುರುತಿಸಿದೆ. ಈಗ ಆರೋಪಿತರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 3 ರಿಂದ 5 ನೇ ಆರೋಪಿ ಪರ ವಕೀಲರವರಿಂದಃ-

*3.* ಈ ಮೊದಲು ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೆ ಆದರೆ ಅಫೀಸ್ ಇರಲಿಲ್ಲ. ನಿ.ಪಿ-*97* ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಮನೆ ಮಾಲೀಕರು ಮತ್ತು ಬಾಡಿಗೆದಾರರು ಸಹಿ ಮಾಡಿದಾಗ ನಾನು ಸಹಿ ಮಾಡಿಲ್ಲ ಎಂದರೆ ನಿಜ. ಹೊಸ ಬಾಡಿಗೆದಾರರು ಬಂದಾಗ ಆ ಬಗ್ಗೆ ಮಾಹಿತಿಯನ್ನು ಪೋಲೀಸ್ ಠಾಣೆಗೆ ಕೊಡುವುದು ಕಡ್ಡಾಯ ಎಂದರೆ ನನಗೆ ಗೊತ್ತಿಲ್ಲ.

**ಉಳಿದ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು